PW-1 :ರಾಮಾಂಜಿನಪ್ಪ

ದಿನಾಂಕಃ **18.07.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 6, 11 ಮತ್ತು 12 ನೇ ಪ್ರತಿವಾದಿಗಳ ಪರ ಶ್ರೀ.ಎಸ್ ಆರ್ ವಿ ವಕೀಲರಿಂದಃ**

ಬೀಮಪ್ಪ ಮತ್ತು ಅಕ್ಕಲಪ್ಪನ ನಡುವೆ ವಿಭಾಗವಾಗಿರುತ್ತದೆ. ಇವರಿಬ್ಬರು ಯಂಗಪ್ಪನ ಮಕ್ಕಳು. ಅಕ್ಕಲಪ್ಪನ ತಮ್ಮ ಗುರ್ರಪ್ಪ ಎಂದರೆ ಸರಿ. 100 ವರ್ಷದ ಹಿಂದೆ ಬೀಮಪ್ಪ ಮತ್ತು ಅಕ್ಕಲಪ್ಪನ ನಡುವೆ ವಿಭಾಗವಾಗಿರುತ್ತದೆ. ಆ ಬಗ್ಗೆ ನಮ್ಮ ತಾತ ಚಿನ್ನಪ್ಪ ನನಗೆ ಹೇಳಿರುತ್ತಾರೆ. ಬೀಮಪ್ಪ 90 ವರ್ಷದ ಹಿಂದೆ ಮೃತಪಟ್ಟಿರುತ್ತಾರೆ. ಅವರು ಮೃತಪಟ್ಟಾಗ ಚಿನ್ನಪ್ಪ ಇದ್ದರೋ ಇಲ್ಲವೋ ಗೊತ್ತಿಲ್ಲ. ಬೀಮಪ್ಪ ಮೃತಪಟ್ಟಾಗ ನಾನು ಹುಟ್ಟಿರಲಿಲ್ಲ. ನನ್ನ ತಾಯಿ ನಾನು 9 ತಿಂಗಳು ಮಗುವಾಗಿದ್ದಾಗ ನನ್ನ ತಾಯಿ ತೀರಿಕೊಂಡಿರುತ್ತಾರೆ. ನನಗೆ 56 ವರ್ಷ ವಯಸ್ಸು. ಕೇತುವಾರು ಮೂಲಕ ಬೀಮಪ್ಪ ಮತ್ತು ಅಕ್ಕಲಪ್ಪ ವಿಭಾಗ ಮಾಡಿಕೊಂಡಿರುತ್ತಾರೆ. ಬೀಮಪ್ಪನಿಗೆ ವಿಭಾಗದಲ್ಲಿ ಸರ್ವೆ ನಂಃ 51 ಮತ್ತು 55 ಬಂದಿರುತ್ತದೆ. ಅಕ್ಕಲಪ್ಪನಿಗೆ ಸರ್ವೆ ನಂಃ 40/2, 139, 47, 30/1 ಮತ್ತು 25 ಬಂದಿರುತ್ತದೆ. ಅದರಂತೆ ಅವರ ಹೆಸರಿಗೆ ಮ್ಯುಟೇಶನ್ ಆಗಿರುತ್ತದೆ.

2. ಸದರಿ ಮ್ಯುಟೇಶನ್ ವಹಿಯನ್ನು ಹಾಜರುಪಡಿಸಿಲ್ಲ. ಮೌಖಿಕವಾಗಿ ವಿಭಾಗವಾಗಿರುವ ಬಗ್ಗೆ ಮ್ಯುಟೇಶನ್ ಮತ್ತು ಕೇತುವಾರು ದಾಖಲೆ ಮಾತ್ರ ಇದೆ. ನನ್ನ ಮುತ್ತಾತ ಯಂಗಪ್ಪ 80 ವರ್ಷದ ಹಿಂದೆ ತೀರಿಕೊಂಡಿರುತ್ತಾರೆ. ಬೀಮಪ್ಪ, ಅಕ್ಕಲಪ್ಪ ಮತ್ತು ಗುರ್ರಪ್ಪ ರವರ ವಂಶವೃಕ್ಷ ನಾನು ಹಾಜರುಪಡಿಸಿಲ್ಲ. ನನ್ನ ತಾತನ ವಂಶವೃಕ್ಷ ಹಾಜರುಪಡಿಸಿದ್ದೇನೆ. ಬೀಮಪ್ಪ, ಅಕ್ಕಲಪ್ಪ ನ ನಡುವೆ ಮೌಖಿಕವಾಗಿ ವಿಭಾಗ ಆಗಿಲ್ಲ ಎಂದರೆ ಸರಿಯಲ್ಲ. ಯಂಗಪ್ಪ ಮೃತಪಟ್ಟ ನಂತರ ಬೀಮಪ್ಪನ ಹೆಸರಿಗೆ ಖಾತೆ ಆಗಿರುತ್ತದೆ. ಬದುಕಿದ್ದಾಗ ಆಗಿರುತ್ತದೆ ಎಂದು ಉತ್ತರಿಸುತ್ತಾರೆ. ಯಂಗಪ್ಪ

ಮೃತಪಟ್ಟ ನಂತರ ಅವರ 1 ನೇ ಹೆಂಡತಿ ಮಗ ಬೀಮಪ್ಪನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸರಿ. ಬೀಮಪ್ಪ ಮೃತಪಟ್ಟ ನಂತರ ಸರ್ವೆ ನಂಃ 51 ಮತ್ತು 55 ರ ಖಾತೆ ಅವರ ಮಕ್ಕಳಾದ ವೆಂಕಟರಮಣಪ್ಪ, ಚಿನ್ನಪ್ಪ ಮತ್ತು ರಾಮಪ್ಪನ ಹೆಸರಿಗೆ ಆಗಿರುತ್ತದೆ ಎಂದರೆ ಸರಿ. ಅವರ ಹೆಸರಿಗೆ ಪೌತಿ ಮೂಲಕ ಖಾತೆ ಆಗಿರುತ್ತದೆ ಎಂದರೆ ಸರಿ. ಯಂಗಪ್ಪ ಮೃತಪಟ್ಟ ನಂತರ ಪೌತಿ ವಾರಸು ಮೂಲಕ ಬೀಮಪ್ಪನ ಹೆಸರಿಗೆ 1925 ರಲ್ಲಿ ಖಾತೆ ಆಗಿರುತ್ತದೆ ಎಂದರೆ ಸರಿ. ಯಂಗಪ್ಪ ಮೃತಪಟ್ಟಾಗ ಬೀಮಪ್ಪ, ಅಕ್ಕಲಪ್ಪ ಮತ್ತು ಯಂಗಪ್ಪ ಒಟ್ಟಿಗೆ ಇದ್ದರೂ ಎಂದರೆ ನನಗೆ ಗೊತ್ತಿಲ್ಲ. ಆ ಸಂದರ್ಭ ಯಂಗಪ್ಪನ ದೊಡ್ಡ ಮಗ ಬೀಮಪ್ಪ ಮನೆಯ ಯಜಮಾನ ಆಗಿದ್ದ ಎಂದು ಗೊತ್ತಿಲ್ಲ.

3. ತಾಲೂಕು ಕಛೇರಿಯಲ್ಲಿ ಪೌತಿ ವಾರಸು ಮೂಲಕ ಖಾತೆದಾರರ ಮಕ್ಕಳಿಗೆ ಖಾತೆ ಮಾಡುತ್ತರೆ ಎಂದರೆ ಸರಿ. ಸರ್ವೆ ನಂಃ 51 ಕ್ಕೆ ಸಂಬಂದಪಟ್ಟಂತೆ ಪಹಣಿ ಬಂದಿರುತ್ತದೆ ಎಂದರೆ ಸರಿಯಲ್ಲ. ಗುರ್ರಪ್ಪ ಮತ್ತು ವೆಂಕಟರಮಣಪ್ಪನ ಹೆಸರಿನಲ್ಲಿ ಜಂಟೀಯಾಗಿ 2016 ರವರೆಗೆ ಕೆಲವು ವರ್ಷಗಳು ಪಹಣಿ ಬಂದಿವೆ ಎಂದರೆ ಸರಿಯಲ್ಲ. ಸರ್ವೆ ನಂಃ 25/2, 30/1, 47/1, 139, 40/2 ರಾಪ್ಪೆ ಗ್ರಾಮದ ಸ್ವತ್ತುಗಳಿಗೆ ನಾನು ವಿಭಾಗ ಕೋರಿ ದಾವೆ ಸಲ್ಲಿಸಿದ್ದೇನೆ ಎಂದರೆ ಸರಿ. ನನಗೆ ಗೊತ್ತಿಲ್ಲದೆ ಸಲ್ಲಿಸಿದ್ದೆನೆ. ಸದರಿ 5 ಪಹಣಿಗಳಲ್ಲಿ ರಾಮಯ್ಯ, ಚಿನ್ನಪ್ಪನ ಮಗ ಗುರ್ರಪ್ಪ, ಚಿನ್ನಪ್ಪನ ಮಗ ಬೀಮಪ್ಪನ ಹೆಸರು ಇಂದಿಗೂ ಸಹ ಬರುತ್ತಿದೆ ಎಂದರೆ ಸರಿ.

4. ನಾನು ಆ ಹಿಂದೆ ಸಲ್ಲಿಸಿದ್ದ ದಾವೆಯಲ್ಲಿ ಸರ್ವೆ ನಂಃ 50 ಮತ್ತು 51 ಸ್ವತ್ತುಗಳನ್ನು ಸೇರಿಸಿರಲಿಲ್ಲ ಎಂದರೆ ಸರಿ. ಶ್ರೀನಿವಾಸಲು, ಆದಿಶೇಷಯ್ಯ, ನಾಗೇಂದ್ರಪ್ಪ, ಅಶ್ವಥಪ್ಪ ರವರುಸಲ್ಲಿಸಿರುವ ಪ್ರತಿವಾದಪತ್ರ ವಿಚಾರ ತಿಳಿದುಕೊಂಡಿದ್ದೇನೆ. ಸರ್ವೆ ನಂಃ 51, 55, 25/2, 30/1, 47/1, 139, 40/2 ಈ 7 ಸ್ವತ್ತುಗಳಿಗೆ ಸಂಬಂದಪಟ್ಟಂತೆ ವಿಭಾಗ ದಾವೆ ಸಲ್ಲಿಸಲಾಗಿದೆ ಎಂದರೆ ಸರಿ. ಯಂಗಪ್ಪ ಮೃತಪಟ್ಟ ನಂತರ ಬೀಮಪ್ಪ ಮನೆಯ ಯಜಮಾನ ಆಗಿದ್ದು ಆತನ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ 2 ಸರ್ವೆ ನಂಬರ್ ಆಗಿದೆ ಎಂದು ಉತ್ತರಿಸುತ್ತಾರೆ.

ವಿನಂತಿಯ ಮೇರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.

(**ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.